ಹೇಳಿದ್ದಾರೆ ಅವರನ್ನು ಕರೆಸಿ , ಮಾನ್ಯ ಶಾಸಕರನ್ನು ಕರೆಸಿ ಎಷ್ಟು ಸಾಧ್ಯವೋ ಅಷ್ಟು ಕಡಿಮೆ ಮಾಡಿಸಿ ಆ ಹಣವನ್ನು ಸಹ ಸರ್ಕಾರದಿಂದ ತುಂಬಲಿಕ್ಕೆ ವ್ಯವಸ್ಥೆಯನ್ನು ಮಾಡುತ್ತೇನೆ

ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ ನೀವು ಕರೆಸುವವರೆಗೆ ಪರ್ಮಿಷನ್ ಆದರೂ ಕೊಡಿಸಿ ಈಗಾಗಲೇ ಪ್ರಾಜೆಕ್ಟ್ ಕಂಪ್ಲೀಟ್ ಆಗಿ ಒಂದು ವರ್ಷವಾಯಿತು /ಪೈಪ್‌ಲೈನ್ ವ್ಯವಸ್ಥೆಯೆಲ್ಲಾ ಕಂಪ್ಲೀಟ್ ಆಗಿದೆ ಅದಕ್ಕೆ ಪರ್ಮಿಷನ್ ಆದರೂ ಕೊಡಿ ಹಣ ಕಟ್ಟಿಸುವುದೇನಿದ್ದರೂ, ನಾವು ಮಾಡಬಹುದು ನಾವು, ನೀವು ಕುಳಿತು ಸಂಧಾನ ಮಾಡಿ ಕಟ್ಟಬೇಕಾಗಿರುವ ಹಣವನ್ನು ಕಟ್ಟೋಣವಂತೆ ಅಷ್ಟರವರೆಗೆ ನಮಗೆ ನೀರು ಡ್ರಾ ಮಾಡಲಿಕ್ಕೆ ಅನುಮತಿ ಕೊಡಬೇಕು

ಶ್ರೀ ಎಸ್ ಎ ರವೀಂದ್ರನಾಥ್(ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು) ಅವರನ್ನು ಮುಂದಿನ ವಾರವೇ ಕರೆಸಿ ನಾನು ಮಾತನಾಡುತ್ತೇನೆ

ಅಧ್ಯಕ್ಷರು ವೆಂಕಟಮುನಿಯಪ್ಪನವರು ಪ್ರಶ್ನೆಯನ್ನು ಕೇಳಿ

ಬಂಗಾರಪೇಟೆ ಎಪಿಎಂಸಿ ಕಾಮಗಾರಿಗಳು

122 (980)– ಶ್ರೀ ವೆಂಕಟಮುನಿಯಪ್ಪ ಬಿ ಪಿ (ಬೇತಮಂಗಲ)– ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2005–06ನೇ ಸಾಲಿನಲ್ಲಿ ಬಂಗಾರಪೇಟೆ ತಾಲ್ಲೂಕಿನ ಎಪಿಎಂಸಿ ಪ್ರಾಂಗಣದಲ್ಲಿ ನಿರ್ಮಾಣಗೊಳ್ಳುತ್ತಿರುವ ಕಟ್ಟಡಗಳಿಗೆ ಮಂಜೂರಾದ ಮೊಬಲಗು ಎಷ್ಟು,

ಆ) ಈ ಕೊರಡಿಗಳು ಹಾಗೂ ಇತರೆ ಉಗ್ರಾಣದ ಕಾಮಗಾರಿ ಅವಶ್ಯಕತೆ ಇದೆಯೇ,

ಇ) ಇದ್ದಲ್ಲಿ, ಈ ಹಿಂದೆ ನಿರ್ಮಾಣಗೊಂಡಿರುವ ವಾಣಿಜ್ಯ ಮಳಿಗೆಯ ಅಂಗಡಿಗಳು ಖಾಲಿಯಿರಲು ಕಾರಣವೇನು,

ಈ) ಈಗ ನಡೆಯುತ್ತಿರುವ ಕಾಮಗಾರಿಗಳು ಬಹಳಷ್ಟು ಕಳಪೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಉ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳು ಯಾವುದು,

ಊ) ಇಲ್ಲದಿದ್ದಲ್ಲಿ, ಈ ಕಾಮಗಾರಿಗಳ ಗುಣಮಟ್ಟ ನಿರೀಕ್ಷಿಸ ಲಾಗುವುದೇ?

ಶ್ರೀ ಶರಣಬಸಪ್ಪ ದರ್ಶನಾಪುರ (ಕೃಷಿ ಮಾರುಕಟ್ಟೆ ಸಚಿವರು)

ಅ) 2005–06ನೇ ಸಾಲಿನಲ್ಲಿ ಅನುಮೋದನೆ ಪಡೆದು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಂಗಾರಪೇಟೆ ಪ್ರಾಂಗಣದಲ್ಲಿ ನಿರ್ಮಾಣಗೊಳ್ಳುತ್ತಿರುವ ಕಟ್ಟಡಗಳಿಗೆ ಮಂಜೂರಾದ ಮೊತ್ತ ರೂ 79 00 ಲಕ್ಷಗಳು

ಆ) ಹೌದು

ಇ) (i) ಈ ಹಿಂದೆ ಜಾನುವಾರು ಮಾರುಕಟ್ಟೆ ಪ್ರಾಂಗಣದಲ್ಲಿ ನಿರ್ಮಾಣ ಮಾಡಿದ್ದ 18 ಸಂಖ್ಯೆ ವಾಣಿಜ್ಯ ಸಣ್ಣ ಅಂಗಡಿಗಳನ್ನು 2005–06ರಲ್ಲಿ ಸಾರ್ವಜನಿಕರಿಗೆ ಹಂಚಿಕೆ ಮಾಡಲಾಗಿದೆ

(ii) 36 ಸಂಖ್ಯೆ ವಾಣಿಜ್ಯ ಸಣ್ಣ ಅಂಗಡಿಗಳ ನಿರ್ಮಾಣ ಕಾಮಗಾರಿ ಮುಕ್ತಾಯ ಹಂತದಲ್ಲಿದ್ದು, ಪೂರ್ಣಗೊಂಡ ನಂತರ ಸಾರ್ವಜನಿಕರಿಗೆ ಹಂಚಿಕೆ ಮಾಡಲು ಕ್ರಮ ಜರುಗಿಸಲಾಗುವುದು

ಇ) ಬಂದಿಲ್ಲ

ಈ) ಉದ್ಭವಿಸುವುದಿಲ್ಲ

ಉ) ಕಾಮಗಾರಿಗಳ ನಿರ್ಮಾಣ ಹಂತದಲ್ಲಿಯೇ ಗುಣಮಟ್ಟ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ

ಶ್ರೀ ಬಿ ಪಿ ವೆಂಕಟಮುನಿಯಪ್ಪ ಸಚಿವರು ಉತ್ತರವನ್ನೇನೋ ನೀಡಿದ್ದಾರೆ ಬಂಗಾರಪೇಟೆ ತಾಲ್ಲೂಕಿನ ಎ ಪಿ ಎಂ ಸಿ ಯಲ್ಲಿ ಲಕ್ಷಾಂತರ ರೂಪಾಯಿಗಳ ಕೆಲಸವನ್ನು ಮಾಡುತ್ತಿದ್ದಾರೆ ಸಂಪೂರ್ಣವಾಗಿ ಆ ಕೆಲಸ ಕಳಪೆಯಾಗಿದೆ ಅದಕ್ಕೆ ಸಂಬಂಧಪಟ್ಟ ಅಲ್ಲಿರುವ ಇಂಜಿನಿಯರ್ ಮತ್ತು ಸೆಕ್ರೆಟರಿ ಆ ಗುತ್ತಿಗೆದಾರರೊಂದಿಗೆ ಶಾಮೀಲಾಗಿರುವುದರಿಂದ ಅಲ್ಲಿ ಕೆಲಸ ಪೂರ್ಣ ಕಳಪೆ ಮಟ್ಟದಲ್ಲಿ ನಡೆಯುತ್ತಿದೆ ಅದಕ್ಕೆ ತಾವು ಸರಿಯಾಗಿ ಉತ್ತರವನ್ನು ನೀಡಿಲ್ಲ ತಪ್ಪು ಮಾಹಿತಿಯನ್ನು ನೀಡಿದ್ದಾರೆ

ಶ್ರೀ ಶರಣಬಸಪ್ಪ ದರ್ಶನಾಪುರ (ಕೃಷಿ ಮಾರುಕಟ್ಟೆ ಸಚಿವರು) ಬಂಗಾರಪೇಟೆಯಲ್ಲಿ ಎ ಪಿ ಎಂ ಸಿ ಯಲ್ಲಿ ನಡೆಯುತ್ತಿರುವ ಕೆಲಸದ ಬಗ್ಗೆ ಸಂಪೂರ್ಣವಾದಂಥ ವಿವರವನ್ನು ಕೊಟ್ಟಿದ್ದೇವೆ ಅವರು 2005–06ನೇ ಸಾಲಿನಲ್ಲಿ ತಾವು ಎಷ್ಟು ಹಣಕ್ಕೆ ಮಂಜೂರಾತಿ ಕೊಟ್ಟಿದ್ದೀರಿ ಎಂದು

ಕೇಳಿರುವುದಕ್ಕೆ ಸುಮಾರು 79 00 ಲಕ್ಷರೂಗಳನ್ನು ಕೊಟ್ಟಿದ್ದೇವೆ ಅಲ್ಲಿ ಸುಮಾರು 18 ಮಳಿಗೆಗಳನ್ನು ಹೋದ ವರ್ಷ ಅವರಿಗೆ ಕೊಟ್ಟಿದ್ದೇವೆ ಈಗ ಇನ್ನೂ 36 ಕಮರ್ಷಿಯಲ್ ಮಳಿಗೆಗಳು ಮುಕ್ತಾಯದ ಹಂತದಲ್ಲಿವೆ ಇದಕ್ಕೆ ಈಗಾಗಲೇ ಎಲ್ಲಾ ರೀತಿಯ quality test ಅನ್ನು ಮಾಡಿಸಿದ್ದೇವೆ ಸದಸ್ಯರು ಆ ಬಗ್ಗೆ ಇನ್ನೂ ಅನುಮಾನ ಪಡುತ್ತಿದ್ದಾರೆ ಕಳಪೆ ಮಟ್ಟ ಎಂದು ಹೇಳುತ್ತಿರುವುದರಿಂದ ಇನ್ನು ಎರಡು ಮೂರು ದಿವಸಗಳಲ್ಲಿ ನಮ್ಮ Superintendent Engineer ಅವರನ್ನು ಕಳುಹಿಸಿ ಮತ್ತೊಂದು ಬಾರಿ ಅದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳುವುದಿದ್ದರೆ ಆ ಬಗ್ಗೆ ನಾವು ತ್ವರಿತವಾಗಿ ಕ್ರಮ ತೆಗೆದುಕೊಳ್ಳುತ್ತೇವೆ

ಶ್ರೀ ಬಿ ಪಿ ವೆಂಕಟಮುನಿಯಪ್ಪ ಅದರ ಬಗ್ಗೆ ಸಮಗ್ರವಾಗಿ ಪರಿಶೀಲನೆ ಮಾಡಿ ಸಂಬಂಧಪಟ್ಟ ಅಧಿಕಾರಿಗಳು ಬಂದು ಇದರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲವೆಂದರೆ ನಮ್ಮ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿಗಳು ಅನ್ಯಾಯವಾಗಿ ನಷ್ಟವಾಗುತ್ತದೆ ಆ ಸಂಬಂಧಪಟ್ಟ ಇಂಜಿನಿಯರ್ ಕೂಡ ಅವರೊಂದಿಗೆ ಶಾಮೀಲಾಗಿದ್ದಾರೆ ಸರ್ಕಾರ ಇದರ ಬಗ್ಗೆ ತನಿಖೆ ಮಾಡಿ ಅವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕು

ಶ್ರೀ ಶರಣಬಸಪ್ಪ ದರ್ಶನಾಪುರ (ಕೃಷಿ ಮಾರುಕಟ್ಟೆ ಸಚಿವರು) ನಾವು ಹೇಳಿದ್ದೇವೆ ಆದಷ್ಟು ಬೇಗ ಒಂದೆರಡು ದಿನಗಳಲ್ಲಿ Superintendent Engineer ಅವರನ್ನು ಕಳುಹಿಸಿ ಅದರ ಬಗ್ಗೆ ಅಲ್ಲಿ ಕೆಲಸ ಏನಾದರೂ ಕಳಪೆ ಮಟ್ಟದ್ದಾಗಿದೆ ಎಂದು ವರದಿ ಬಂದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಲೇಬೇಕಾಗುತ್ತದೆ, ಅದರ ಬಗ್ಗೆ ಎರಡನೇ ಮಾತೇ ಇಲ್ಲ

ಶ್ರೀ ಬಿ ಪಿ ವೆಂಕಟಮುನಿಯಪ್ಪ ಮಂತ್ರಿಗಳು ಆ ಬಗ್ಗೆ ಸಂಪೂರ್ಣವಾಗಿ ಪರಿಶೀಲನೆ ಮಾಡಿಸಬೇಕು

ಅಧ್ಯಕ್ಷರು ಅಯಿತು, ಪರಿಶೀಲನೆ ಮಾಡಿಸುತ್ತೇವೆಂದು ಹೇಳಿದ್ದಾರೆ ಬಿಡಿ ಈಗ ಶ್ರೀ ಎನ್ ಸೂರ್ಯನಾರಾಯಣ ರೆಡ್ಡಿ, ಇಲ್ಲವೇ, ಶ್ರೀ ಜೆ ನರಸಿಂಹಸ್ವಾಮಿ ನಿಮ್ಮ ಪ್ರಶ್ನೆಯನ್ನು ಕೇಳಿ